# ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ರಿ.)

ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು-570 004

# ನಿಯಮಾವಳಿ

ಆಡಳಿತ ಕಾರ್ಯಾಲಯ :

**ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ರಿ.)**

**ಮೈಸೂರು**

ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ, 1ನೆಯ ಮುಖ್ಯರಸ್ತೆ,
ಜಯನಗರ 8ನೇ ಬ್ಲಾಕ್, ಬೆಂಗಳೂರು-560 070.
ದೂ: 080-22970125

Scanned with CamScanner

GOVERNMENT OF KARNATAKA

S.O.R NO : MYS-SO112-1981-82

Record No : 14

Office of the District Registrar,
Mysore
Date: 30/11/2015

**ENDORSEMENT No.1**

Ref : Proposal for Regsitration of Amendment on dated 30/11/2015 by President/Secratary : AKHILA BHARATHA SHARANA SAHITHYA PARISHAT : Society.

This is certify that the Amendment to the,
Memorandum of Association under Section 9, and
Memorandum of Association under Section 10,
of the Karnataka Societies Registration Acts 1960,is hereby Registration in this Office on this day 30/11/2015.

Fees Collected Rs. 1470/- Only

CD Number : MYSS5

30/11/15
ಸಂಘ ಸಂಸ್ಥೆಗಳ ನೋಂದಣಾಧಿಕಾರಿ
Societies and Firms,
Mysore

To President/Secratary,
SRI SHIVARATHRESWARA MUTT,
RAMANUJA ROAD,
MYSORE-570004

# ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ರಿ.)
## ಮೈಸೂರು

ಆಡಳಿತ ಕಾರ್ಯಾಲಯ : ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ,
೧ನೆಯ ಮುಖ್ಯರಸ್ತೆ, ಜಯನಗರ ೮ನೇ ಬ್ಲಾಕ್,
ಬೆಂಗಳೂರು-೫೬೦ ೦೭೦. ದೂ: ೦೮೦-೨೬೯೭೦೧೨೫

**೧. ಹೆಸರು:**

ಅ) ಈ ಸಂಸ್ಥೆಯ ಹೆಸರು "ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ರಿ)" ಎಂದು ಇರತಕ್ಕದ್ದು

ಆ) ಈ ನಿಬಂಧನೆಗಳಲ್ಲಿ ಮುಂದೆ ಇದನ್ನು 'ಪರಿಷತ್ತು' ಎಂದು ಕರೆಯಲಾಗುವುದು.

**೨. ವ್ಯಾಪ್ತಿ:**

ಪರಿಷತ್ತಿನ ಕಾರ್ಯವ್ಯಾಪ್ತಿಯು ಶರಣ ಸಾಹಿತ್ಯ, ಸಂಸ್ಕೃತಿ ಇತ್ಯಾದಿಯನ್ನು ಅನುಸರಿಸುವ ಎಲ್ಲಾ ಪ್ರದೇಶಗಳನ್ನೂ ಒಳಗೊಂಡಿರತಕ್ಕದ್ದು.

**೩. ಕಾರ್ಯಾಲಯ:**

ಪರಿಷತ್ತಿನ ಕೇಂದ್ರ ಕಾರ್ಯಾಲಯವು ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು-೪ ಇಲ್ಲಿ ಇರುತ್ತದೆ. ಅವಶ್ಯಕತೆ ಬಿದ್ದಾಗ ಕಾರ್ಯಾಲಯದ ಶಾಖೆಯನ್ನು ಇತರ ಕಡೆಗಳಲ್ಲಿಯೂ ತೆರೆಯಬಹುದು.

**೪. ಉದ್ದೇಶ:**

ಶರಣ ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜಾನಪದ ಇವುಗಳ ಸಂರಕ್ಷಣೆ, ಸಂಶೋಧನೆ, ಸಂವರ್ಧನೆ ಮತ್ತು ಪ್ರಕಟಣೆ ಹಾಗೂ ಪ್ರಸಾರಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯವನ್ನು ನಡೆಸತಕ್ಕದ್ದು.

**೫. ಕಾರ್ಯಚಟುವಟಿಕೆಗಳು:**

ನಾಲ್ಕನೆಯ ನಿಬಂಧನೆಯಲ್ಲಿ ನಿರೂಪಿತವಾದ ಶರಣ ಸಾಹಿತ್ಯ



Scanned with CamScanner

ಪರಿಷತ್ತಿನ ಉದ್ದೇಶ ಸಾಧನೆಗೆ ಈ ಕೆಳಗೆ ಕಾಣಿಸಿರುವ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

ಅ) ಸಮ್ಮೇಳನ, ಸಾಹಿತ್ಯೋಪನ್ಯಾಸಗಳು, ಶರಣರ ಜಯಂತಿ, ವರ್ಧಂತಿ ಮುಂತಾದ ಉತ್ಸವಗಳು, ವಸ್ತುಸಂಗ್ರಹಾಲಯ ಮತ್ತು ಸಂಚಾರಿ ಘಟಕ ಸ್ಥಾಪನೆ, ವಿಚಾರ ಸಂಕಿರಣಗಳು, ಸ್ಪರ್ಧೆಗಳು, ಕಲಾಪ್ರದರ್ಶನ, ಇತ್ಯಾದಿ.

ಆ) ಶರಣರ ಸಾಹಿತ್ಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳ ಸಂಗ್ರಹ, ಸಂಶೋಧನೆ, ಪ್ರಕಟಣೆ ಹಾಗೂ ಐತಿಹಾಸಿಕ ದಾಖಲಾತಿಗಳ ಸಂಗ್ರಹ ಮತ್ತು ಪ್ರಕಾಶನ.

ಇ) ಶರಣರ ಚರಿತ್ರೆ, ಸಂಶೋಧನೆ, ತತ್ತ್ವವಿಚಾರ, ಪಾರಿಭಾಷಿಕ ಪದಕೋಶ, ಸಾಹಿತ್ಯ, ಕಲೆ, ಧರ್ಮ, ದರ್ಶನ ಇತ್ಯಾದಿ ವಿಷಯಗಳನ್ನು ಕುರಿತ ಗ್ರಂಥ ಪ್ರಕಟಣೆಗೆ ಸಹಾಯ, ಪ್ರಸಾರ, ಪ್ರಚಾರ ಮತ್ತು ಮಾರಾಟ.

ಈ) ಶರಣರ ಸಾಹಿತ್ಯದಲ್ಲಿ ವಿಜ್ಞಾನ, ಧರ್ಮ, ದರ್ಶನ, ಮಾನವಿಕ ವಿಷಯಗಳನ್ನು ಕುರಿತ ಗ್ರಂಥ ಪ್ರಕಟಣೆಗಳು ಮತ್ತು ಅನ್ಯಾನ್ಯ ದರ್ಶನ, ಧರ್ಮಗಳೊಡನೆ ತೌಲನಿಕ ಅಧ್ಯಯನ ಹಾಗೂ ಗ್ರಂಥ ಪ್ರಕಾಶನ ಹಾಗೂ ಅನ್ಯ ಭಾಷೆಗಳಿಗೆ ಭಾಷಾಂತರ ಮಾಡಿಸುವುದು ಹಾಗೂ ವಿದೇಶಗಳಲ್ಲಿ ಶರಣ ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಸೌಲಭ್ಯ ಕಲ್ಪಿಸುವುದು ಇತ್ಯಾದಿ.

ಉ) ಶರಣ ಸಾಹಿತ್ಯ, ಶರಣ ಗೀತೆ, ಶರಣ ಕಥಾ ಸಂಕೀರ್ತನ, ಗಮಕವಾಚನ, ಗಾಯನ, ಇತ್ಯಾದಿ

ಊ) ಶರಣ ಸಾಹಿತ್ಯ ಪರಿಷತ್ತಿನ ಘನೋದ್ದೇಶಗಳನ್ನು ಬಿತ್ತರಿಸುವ ಪಾಕ್ಷಿಕ, ಮಾಸಿಕ, ತ್ರೈಮಾಸಿಕ, ಷಾಣ್ಮಾಸಿಕ, ವಾರ್ಷಿಕಪತ್ರಿಕೆಗಳನ್ನು ಪ್ರಕಟಿಸುವುದು.

ಎ) ಶರಣ ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ಸರಕಾರ ಮತ್ತು ಇತರ ಸಂಸ್ಥೆಗಳು ಕೈಗೊಳ್ಳುವ ಕಾರ್ಯಗಳಲ್ಲಿ ಸಹಕರಿಸುವುದು ಮತ್ತು ಸಲಹೆ ಸೂಚನೆಗಳನ್ನು ಕೊಡುವುದು

ಏ) ವಿದ್ವಾಂಸರಿಗೆ ಪ್ರೋತ್ಸಾಹ:

೧. ಶರಣ ಸಾಹಿತ್ಯ, ಕಲೆ, ಧರ್ಮ, ಇವುಗಳಲ್ಲಿ ವಿಶೇಷ ಅನುಭವವನ್ನು ಗಳಿಸಿರುವ ವಿದ್ವಾಂಸರನ್ನು ಆಹ್ವಾನಿಸಿ ವಿಚಾರ ಸಂಕಿರಣ ಏರ್ಪಡಿಸುವುದು.



೨. ಪ್ರೌಢ ಗ್ರಂಥಗಳ ಕರ್ತೃಗಳಿಗೆ ಪ್ರೋತ್ಸಾಹ ಮತ್ತು ಧನಸಹಾಯ ಮಾಡುವುದು.

೩. ಶರಣ ಸಾಹಿತ್ಯ ರಚನೆ, ಸಂಶೋಧನೆ, ವಿಮರ್ಶೆ ಮತ್ತು ಪ್ರಸಾರ ಕಾರ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯರಿಗೆ ಗೌರವ ಸದಸ್ಯತ್ವ ನೀಡುವುದು; ಸನ್ಮಾನ ಮಾಡುವುದು.

೪. ಇವುಗಳಲ್ಲದೆ ಇಂಥ ಇತರ ಕಾರ್ಯಗಳನ್ನೂ ಪರಿಷತ್ತು ಕೈಗೊಳ್ಳುವುದು.

**೬. ಅಂಗರಚನೆ:**

ಅ) ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗಿರುವ ೧೮ ವರ್ಷಗಳ ಮತ್ತು ಅದಕ್ಕೆ ಮೇಲ್ಪಟ್ಟ ವಯಸ್ಸಿನ ಎಲ್ಲಾ ಶರಣ ಧರ್ಮಾಭಿಮಾನಿಗಳೂ, ಸಂಸ್ಥೆಗಳೂ ಪರಿಷತ್ತಿನ ಸದಸ್ಯತ್ವವನ್ನು ಪಡೆಯಬಹುದು.

ಆ) **ಸದಸ್ಯರಲ್ಲಿ ಈ ಕೆಳಗೆ ಕಂಡ ವರ್ಗಗಳಿರತಕ್ಕದ್ದು:**

| | | |
|---|---|---|
| ೧. | ಮಹಾಪೋಷಕರು | ರೂ. ೨೫,೦೦೦-೦೦ |
| ೨. | ಪೋಷಕರು | ೧೦,೦೦೦-೦೦ |
| ೩. | ದಾತೃಗಳು | ೫,೦೦೦-೦೦ |
| ೪. | ಆಜೀವ ಸದಸ್ಯರು | ೫೦೦-೦೦ |
| ೬. | ಸದಸ್ಯ ಸಂಸ್ಥೆಗಳು: | |
| | ಅ) ಪೋಷಕ ಸಂಸ್ಥೆಗಳು | ೨೦,೦೦೦-೦೦ |
| | ಆ) ಆಜೀವ ಸಂಸ್ಥೆಗಳು | ೧೦,೦೦೦-೦೦ |

**೭. ಪರಿಷತ್ತಿನ ನಿಧಿ:**

ಅ) ನಿಯಮಾವಳಿ ೬ರಲ್ಲಿ ಸೂಚಿಸಿದಂತೆ ವಿವಿಧ ವರ್ಗದ ಸದಸ್ಯತ್ವದಿಂದ ಸಂಗ್ರಹವಾದ ಮೊಬಲಗು, ಪರಿಷತ್ತಿನ ಸ್ಥಾಯಿ ನಿಧಿಗೆ ಸೇರತಕ್ಕದ್ದು. ನಿಶ್ಚಿತ ಠೇವಣಿಯಿಂದ ಬರುವ ಬಡ್ಡಿಯ ಹಣವನ್ನು ಮಾತ್ರ ಕೇಂದ್ರ ಹಾಗೂ ಕ್ಷೇತ್ರ ಕಾರ್ಯ ಚಟುವಟಿಕೆಗಳಿಗಾಗಿ ಉಪಯೋಗಿಸತಕ್ಕದ್ದು.

ಆ) ಪರಿಷತ್ತಿಗೆ ನಿರ್ದಿಷ್ಟ ಯೋಜನೆಗಳಿಗೆ ವಿನಃ ಉಳಿದಂತೆ ಬರುವ ದತ್ತಿ ಕೊಡುಗೆ, ಸಹಾಯಧನ ಇತ್ಯಾದಿಗಳನ್ನು ಕಡ್ಡಾಯವಾಗಿ ಪರಿಷತ್ತಿನ



Scanned with CamScanner

ಕೇಂದ್ರದ ಶಾಶ್ವತ ನಿಧಿಗೆ ಜಮಾ ಮಾಡತಕ್ಕದ್ದು.

ಉ) ಪರಿಷತ್ತಿನ ಹಣವನ್ನು ಕಾಲಕಾಲಕ್ಕೆ ತಿದ್ದುಪಡಿಯಾಗುವ ೧೯೬೧ನೆಯ ಆದಾಯ ತೆರಿಗೆ ಕಾನೂನಿನ ಸೆಕ್ಷನ್ ೧೩(೧) (ಡಿ) ಮತ್ತು ಸೆಕ್ಷನ್ ೧೧(೫)ರ ಪ್ರಕಾರ ಸೂಚಿಸಲ್ಪಡುವ ರೀತಿಯಲ್ಲಿ ತೊಡಗಿಸತಕ್ಕದ್ದು.

ಊ) ಪರಿಷತ್ತಿನ ಹಣವನ್ನು ಮತ್ತು ಆದಾಯವನ್ನು ಅದರ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಅದರ ಯಾವ ಭಾಗವನ್ನೂ ಪರಿಷತ್ತಿನ ಸದಸ್ಯರು ಮತ್ತು ಇತರೆ ಸದಸ್ಯರಿಗೆ ಲಾಭ, ಬಡ್ಡಿ ಅಥವಾ ಡಿವಿಡೆಂಡ್ ಮೂಲಕ ಉಪಯೋಗಿಸತಕ್ಕದ್ದಲ್ಲ

**೮. ಸದಸ್ಯತ್ವದ ವಿವರಗಳು:**

೧. ಸದಸ್ಯರಾಗಿ ಸೇರಲು ಬಯಸುವ ವ್ಯಕ್ತಿ ಅಥವಾ ಸಂಸ್ಥೆಯು ಪರಿಷತ್ತಿನ ಇಬ್ಬರು ಸದಸ್ಯರ ಅನುಮೋದನೆಯನ್ನು ಪಡೆದಿರುವ ತಮ್ಮ ಅಪೇಕ್ಷಾ ಪತ್ರವನ್ನು ೬ನೆಯ ನಿಬಂಧನೆಯಲ್ಲಿ ಕಾಣಿಸಿರುವಂತೆ ಆಯಾ ವರ್ಗದ ಸದಸ್ಯತ್ವಕ್ಕಾಗಿ ಕೊಡತಕ್ಕ ಚಂದಾ ಹಣ ಮತ್ತು ಪ್ರವೇಶ ಧನಗಳೊಡನೆ ಸಲ್ಲಿಸತಕ್ಕದು. ಅಂಥವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರುತ್ತದೆ. ಯಾವ ಕಾರಣದಿಂದಲಾದರೂ ಅಪೇಕ್ಷಾ ಪತ್ರವನ್ನು ಒಪ್ಪಿಕೊಳ್ಳದೇ ಇದ್ದರೆ ಅವರು ಕೊಟ್ಟಿದ್ದ ಮೊಬಲಗನ್ನು ಹಿಂದಿರುಗಿಸಲಾಗುವುದು.

೨. ಪರಿಷತ್ತಿನ ಸಾಮಾನ್ಯ ಸದಸ್ಯತ್ವದ ಅವಧಿಯು ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದವರೆಗೆ ಇರತಕ್ಕದ್ದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಆ ವರ್ಷಾಂತ್ಯದವರೆಗೆ ಮಾತ್ರ ಸದಸ್ಯತ್ವ ಮತ್ತು ಸದಸ್ಯತ್ವದ ಹಕ್ಕು ಬಾಧ್ಯತೆಗಳು ಸಲ್ಲತಕ್ಕದು.

೩. ಸಾಮಾನ್ಯ ಸದಸ್ಯರು ಮತ್ತು ಸಂಸ್ಥೆಗಳು, ಸದಸ್ಯತ್ವದ ಚಂದಾ ಹಣವನ್ನು ಪ್ರವೇಶಧನವಿಲ್ಲದೆ ಆ ವರ್ಷದ ಜನವರಿ ತಿಂಗಳ ಅಂತ್ಯದೊಳಗೆ ಸಲ್ಲಿಸಿ ಸದಸ್ಯತ್ವವನ್ನು ಮುಂದುವರಿಸಿಕೊಳ್ಳಬಹುದು. ತಮ್ಮ ಸದಸ್ಯತ್ವದ ಅವಧಿ ತೀರಿದ ಒಂದು ತಿಂಗಳೊಳಗೆ ಮುಂದುವರಿಸಿಕೊಳ್ಳದಿದ್ದರೆ ಸದಸ್ಯತ್ವವು ರದ್ದಾಗುತ್ತದೆ.

೪. ಅಜೀವ ಸದಸ್ಯರು, ವಾರ್ಷಿಕ ಸದಸ್ಯರು/ಸಂಸ್ಥೆಗಳು ಮತ್ತು ವಿಶೇಷ



ವರ್ಗಗಳ ಸದಸ್ಯರು ತಮ್ಮ ಸದಸ್ಯತ್ವದ ಪೂರ್ಣ ಚಂದಾ ಹಣವನ್ನು ಒಂದೇ ಕಂತಿನಲ್ಲಿ ಸಲ್ಲಿಸತಕ್ಕದ್ದು

೫. ಯಾವುದೇ ವ್ಯಕ್ತಿಯು ಅಥವಾ ಸಂಸ್ಥೆಯು ಪರಿಷತ್ತಿನ ಸದಸ್ಯತ್ವಕ್ಕೆ ಅನರ್ಹವೆಂದು ಕಾರ್ಯಕಾರಿ ಸಮಿತಿಗೆ ಕಂಡು ಬಂದರೆ ಅಥವಾ ಯಾವುದೇ ವ್ಯಕ್ತಿಯ ಅಥವಾ ಸಂಸ್ಥೆಯ ವರ್ತನೆಯು ಪರಿಷತ್ತಿನ ಗೌರವ, ಉದ್ದೇಶ, ಕಾರ್ಯಗಳಿಗೆ ವಿರೋಧವೆಂದು ಕಂಡು ಬಂದರೆ ಅಂಥ ವ್ಯಕ್ತಿ ಅಥವಾ ಸಂಸ್ಥೆ ನೀಡುವ ವಿವರಣೆಯನ್ನು ಪರಿಶೀಲನೆ ಮಾಡಿ ಸದಸ್ಯತ್ವವನ್ನು ವಜಾ ಮಾಡುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. ಅಂಥ ನಿರ್ಣಯವನ್ನು ಮುಂಬರುವ ವಾರ್ಷಿಕಾಧಿವೇಶನದ ಗಮನಕ್ಕೆ ತರತಕ್ಕದ್ದು.

**೯. ಸದಸ್ಯತ್ವದ ಹಕ್ಕು ಬಾಧ್ಯತೆಗಳು:**

೧. ಸದಸ್ಯತ್ವ ಅಂಗೀಕಾರವಾದ ದಿನದಿಂದ ಸದಸ್ಯತ್ವದ ಎಲ್ಲಾ ಹಕ್ಕುಗಳು ಬರುತ್ತದೆ.

೨. ಪರಿಷತ್ತಿನ ಉತ್ಸವ, ಉಪನ್ಯಾಸ, ಗೋಷ್ಠಿ, ಸಮ್ಮೇಳನ ಇತ್ಯಾದಿ ಕಾರ್ಯಗಳಲ್ಲಿ ನಿಯಮಾನುಸಾರ ಭಾಗವಹಿಸುವ ಅಧಿಕಾರವಿರುತ್ತದೆ.

೩. ಪುಸ್ತಕ ಭಂಡಾರ, ವಾಚನಾಲಯ ಮೊದಲಾದ ಸೌಕರ್ಯಗಳನ್ನು ನಿಯಮಾನುಸಾರ ಪಡೆಯಲು ಅಧಿಕಾರವಿರುತ್ತದೆ.

೪. ಸದಸ್ಯರು ಸ್ವಂತ ಪ್ರಯೋಜನಕ್ಕಾಗಿ ಪರಿಷತ್ತಿನ ಪ್ರಕಟಣೆಗಳ ಒಂದೊಂದು ಪ್ರತಿಯನ್ನು ಅರ್ಧ ಬೆಲೆಗೆ ಪಡೆಯಲು ಅರ್ಹರಾಗಿರುತ್ತಾರೆ.

೫. ಶರಣ ಸಾಹಿತ್ಯ ಪರಿಷತ್ತಿನ ನಿಯತಕಾಲಿಕೆಗಳಿಗೆ ಪ್ರತ್ಯೇಕ ಚಂದಾದಾರರು ಇರುತ್ತಾರೆ.

೬. ವಾರ್ಷಿಕ ಸಭೆಗಳಲ್ಲಿ ಮತ್ತು ಪರಿಷತ್ತಿನ ಅಧ್ಯಕ್ಷರ ಆಯ್ಕೆಯಲ್ಲಿ ಸರ್ವಸದಸ್ಯರ ಸಾಮಾನ್ಯ ಅಥವಾ ವಿಶೇಷ ಸಭೆಯ ಕಾರ್ಯಕಲಾಪಗಳ ನಿರ್ಣಯಗಳಲ್ಲಿ ಮತ ನೀಡುವ ಅಧಿಕಾರವಿರುತ್ತದೆ.



Scanned with CamScanner

**೧೦. ಸದಸ್ಯ ಸಂಸ್ಥೆಗಳ ಹಕ್ಕು ಬಾಧ್ಯತೆಗಳು:**

ಸಕಲ ಸದಸ್ಯರ ಸಭೆಗಳಲ್ಲಿ ಭಾಗವಹಿಸುವುದಕ್ಕಾಗಿಯೂ ಮತ್ತು ಮತದಾನ ಮಾಡುವುದಕ್ಕಾಗಿಯೂ ಪ್ರತಿಯೊಂದು ಸದಸ್ಯ ಸಂಸ್ಥೆಯು ಒಬ್ಬ ಪ್ರತಿನಿಧಿಯನ್ನು ಕಳುಹಿಸಬಹುದು. ಸದಸ್ಯ ಸಂಸ್ಥೆಯ ಅಧಿಕಾರಿಗಳು ಅಂಥ ಪ್ರತಿನಿಧಿಯ ಹೆಸರನ್ನು ಶರಣ ಸಾಹಿತ್ಯ ಪರಿಷತ್ತಿಗೆ ಸಭೆಗೆ ೧೫ ದಿನ ಮುಂಚಿತವಾಗಿ ಲಿಖಿತ ಮೂಲಕ ತಿಳಿಸಬೇಕು. ಅಂಥ ಪ್ರತಿನಿಧಿಗೆ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅಧಿಕಾರವಿರುವುದಿಲ್ಲ. ಆದರೆ ಅಂಥ ಪ್ರತಿನಿಧಿಯು ಸ್ವತಃ ಶರಣ ಸಾಹಿತ್ಯ ಪರಿಷತ್ತಿನ ಸದಸ್ಯನಾಗಿದ್ದರೆ ಆ ಕಾರಣದಿಂದ ಅಭ್ಯರ್ಥಿಯಾಗಿ ನಿಲ್ಲಬಹುದು ಮತ್ತು ಆತನಿಗೆ ಸಂಸ್ಥೆಯ ಪ್ರತಿನಿಧಿಯಾಗಿ ಒಮ್ಮೆಯೂ, ಸ್ವತಃ ಸದಸ್ಯತ್ವದ ಹಕ್ಕಿನಿಂದ ಒಮ್ಮೆಯೂ ಹೀಗೆ ಎರಡು ಸಲ ಮತದಾನ ಮಾಡುವ ಅಧಿಕಾರವಿರುತ್ತದೆ.

**೧೧. ಕಾರ್ಯಕಾರಿ ಸಮಿತಿ:**

೧. ಶ್ರೀಮತ್ಸುತ್ತೂರು ವೀರಸಿಂಹಾಸನಾಧೀಶ್ವರ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪರಿಷತ್ತಿನ ಸಂಸ್ಥಾಪಕರಾಗಿದ್ದಾರೆ. ಈ ಪೀಠದಲ್ಲಿ ಪರಂಪರಾನುಗತವಾಗಿ ಬರುವ ಪೂಜ್ಯ ಜಗದ್ಗುರುಗಳವರು ಪರಿಷತ್ತಿನ ಶಾಶ್ವತ ಗೌರವಾಧ್ಯಕ್ಷರಾಗಿರುತ್ತಾರೆ. ಶಾಶ್ವತ ಗೌರವಾಧ್ಯಕ್ಷರು ಇನ್ನೋರ್ವ ಗೌರವಾಧ್ಯಕ್ಷರನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನೇಮಕ ಮಾಡಿಕೊಳ್ಳುವ ಅವಕಾಶವಿರುತ್ತದೆ.

೨. ಪರಿಷತ್ತಿನ ಗೌರವಾಧ್ಯಕ್ಷರಾದ ಸುತ್ತೂರು ಶ್ರೀ ವೀರಸಿಂಹಾಸನ ಪೀಠದ ಜಗದ್ಗುರುಗಳವರು ಕಾರ್ಯಕಾರಿ ಸಮಿತಿಗೆ ಇಬ್ಬರು ಪ್ರತಿನಿಧಿಗಳನ್ನು ನಾಮಕರಣ ಮಾಡಲು ಅಧಿಕಾರವಿರುತ್ತದೆ. ಆ ಪ್ರತಿನಿಧಿಗಳು ಕಾರ್ಯಕಾರಿ ಸಮಿತಿಯ ಯಾವುದೇ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ.

ಅಧಿಕಾರವರ್ಗ:

| | | |
|---|---|---|
| ೧. | ಗೌರವಾಧ್ಯಕ್ಷರು | ೨ |
| ೨. | ಅಧ್ಯಕ್ಷರು | ೧ |
| ೩. | ಹಿರಿಯ ಉಪಾಧ್ಯಕ್ಷರು | ೧ |
| ೪ | ಉಪಾಧ್ಯಕ್ಷರುಗಳು | ೨ |



೧. ಪ್ರಧಾನಕಾರ್ಯದರ್ಶಿ-೧

೨. ಕಾರ್ಯದರ್ಶಿಗಳು-೨

೩. ಕೋಶಾಧಿಕಾರಿ-೧

೪. ಹೊರನಾಡ ಘಟಕಗಳ ಪ್ರತಿನಿಧಿಗಳು-೪

೫. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾಘಟಕಗಳ ಅಧ್ಯಕ್ಷರುಗಳು

೬. ಅಧ್ಯಕ್ಷರ ನಾಮಕರಣ ಪ್ರತಿನಿಧಿಗಳು (ಇವರಲ್ಲಿ ಒಬ್ಬರು ಮಹಿಳೆ ಇರತಕ್ಕದ್ದು)-೨

೭. ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು-೧

೮. ಗೌರವಾಧ್ಯಕ್ಷರು ನಾಮಕರಣ ಮಾಡುವ ಪ್ರತಿನಿಧಿಗಳು-೨

೯. ಪರಿಷತ್ತಿನ ಅಧ್ಯಕ್ಷರು ನೇಮಕಮಾಡುವ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರುಗಳ ಪರವಾಗಿ ಪ್ರತಿನಿಧಿ-೧

೧೦. ಪರಿಷತ್ತಿನ ಅಧ್ಯಕ್ಷರು ನೇಮಕ ಮಾಡುವ ಜಿಲ್ಲಾ ಯುವ ವೇದಿಕೆ ಅಧ್ಯಕ್ಷರುಗಳ ಪರವಾಗಿ ಪ್ರತಿನಿಧಿ-೧

**ವಿಶೇಷ ಸೂಚನೆ:**

ಅ) ಪರಿಷತ್ತಿನ ಅಧ್ಯಕ್ಷರ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಪರಿಷತ್ತಿನ ಜಿಲ್ಲಾ ಸಮಿತಿಗಳು ರಚಿತವಾಗಿ ಪರಿಷತ್ತು ಸೂಚಿಸುವ ಕೆಲಸ ಕಾರ್ಯಗಳನ್ನು ನಡೆಸತಕ್ಕದ್ದು.

ಆ) ೧. ಅಧ್ಯಕ್ಷರು ಗೌರವಾಧ್ಯಕ್ಷರೊಡನೆ ಸಮಾಲೋಚಿಸಿ, ಒಪ್ಪಿಗೆಯಾದ ನಂತರ ನಾಮಕರಣಗೊಂಡ ಜಿಲ್ಲಾಧ್ಯಕ್ಷರು ಆ ಜಿಲ್ಲೆಯ ಸದಸ್ಯರಿಂದ ೧೯ ಜನಕ್ಕೆ ಮೀರದಂತೆ ಆಯಾ ಜಿಲ್ಲೆಗೆ ಒಂದು ಜಿಲ್ಲಾ ಕಾರ್ಯಕಾರಿ ಸಮಿತಿಯನ್ನು ರಚಿಸಿ ಕೇಂದ್ರ ಪರಿಷತ್ತಿನ ಒಪ್ಪಿಗೆ ಪಡೆಯತಕ್ಕದ್ದು.

೨. ಜಿಲ್ಲಾ ಕಾರ್ಯಕಾರಿ ಸಮಿತಿಯಲ್ಲಿ ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಇಬ್ಬರು ಕಾರ್ಯದರ್ಶಿಗಳು ಒಬ್ಬರು ಕೋಶಾಧಿಕಾರಿ ಮತ್ತು ಪ್ರತಿ ತಾಲ್ಲೂಕಿನಿಂದ ಒಬ್ಬ ಪ್ರತಿನಿಧಿ ಇರತಕ್ಕದ್ದು. ಕಾರ್ಯಕಾರಿ ಸಮಿತಿಯಲ್ಲಿ ಆಯಾ ಜಿಲ್ಲಾ ಕದಳಿಯ ಮಹಿಳಾ ವೇದಿಕೆ ಮತ್ತು ಜಿಲ್ಲಾ ಯುವವೇದಿಕೆಯ ಅಧ್ಯಕ್ಷರುಗಳು ಇರತಕ್ಕದ್ದು. ಅಗತ್ಯವಿರುವಲ್ಲಿ ಜಿಲ್ಲಾ ಘಟಕಕ್ಕೆ ಒಬ್ಬರು ಗೌರವಾಧ್ಯಕ್ಷರನ್ನು ಪರಿಷತ್ತಿನ ಅಧ್ಯಕ್ಷರೊಡನೆ



Scanned with CamScanner

ಸಮಾಲೋಚಿಸಿ ಒಪ್ಪಿಗೆಯಾದ ನಂತರ ಜಿಲ್ಲಾ ಕಾರ್ಯಕಾರಿ ಸಮಿತಿಗೆ ಆರಿಸಿಕೊಳ್ಳಬಹುದು. ಅ.ಭಾ.ಶ.ಸಾ.ಪರಿಷತ್ತಿನ ಯಾವುದೇ ಘಟಕದ ಪದಾಧಿಕಾರಿಗಳಾಗುವವರು ಕಡ್ಡಾಯವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

೩. ಅ) ತಾಲ್ಲೂಕು ಹಂತದಲ್ಲೂ ಜಿಲ್ಲಾ ಕಾರ್ಯಕಾರಿ ಸಮಿತಿಯ ಮಾದರಿಯಲ್ಲಿ ಸಮಿತಿ ರಚಿಸಿಕೊಳ್ಳಬಹುದು. ತಾಲ್ಲೂಕು ಕಾರ್ಯಕಾರಿ ಸಮಿತಿಯ ಅಧ್ಯಕ್ಷರನ್ನು ಜಿಲ್ಲಾ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ನಾಮಕರಣ ಮಾಡತಕ್ಕದ್ದು.

ಆ) ತಾಲ್ಲೂಕು ಕಾರ್ಯಕಾರಿ ಸಮಿತಿಯು ಜಿಲ್ಲಾ ಕಾರ್ಯಕಾರಿ ಸಮಿತಿಯ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವುದು. ನಗರ ಘಟಕಗಳ ರಚನೆ ಸಂದರ್ಭದಲ್ಲಿ ಜಿಲ್ಲಾಘಟಕ ಮಾದರಿಯನ್ನು ಅನುಸರಿಸುವುದು.

ಇ) ಜಿಲ್ಲಾ/ನಗರ/ತಾಲ್ಲೂಕು ಘಟಕಗಳಿಗೆ ಅನುಕ್ರಮವಾಗಿ_

i) 'ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು' ....................... ಜಿಲ್ಲೆ

ii) 'ನಗರ ಘಟಕ ಶರಣ ಸಾಹಿತ್ಯ ಪರಿಷತ್ತು' ..... ನಗರ

iii) 'ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು' ......... ತಾಲ್ಲೂಕು ಎಂದು ಕರೆಯುವುದು. ಅಲ್ಲದೆ ಜಿಲ್ಲಾ/ನಗರ/ತಾಲ್ಲೂಕಾ ಸಮಿತಿಯ ಪದಾಧಿಕಾರಿಗಳು ಆಯಾ ಕೇಂದ್ರ ಮತ್ತು ಆಯಾ ಭೌಗೋಳಿಕ ವ್ಯಾಪ್ತಿಯ ಸ್ಥಳಗಳಲ್ಲಿಯೇ ವಾಸಮಾಡುತ್ತಿರಬೇಕು.

ಈ) ರಾಜ್ಯ/ಜಿಲ್ಲಾ/ನಗರ/ ತಾಲ್ಲೂಕಾ ಸಮಿತಿಗಳು ಹಣಕಾಸು, ಆಸ್ತಿ, ಠೇವಣಿ ಮೊದಲಾದ ವಿಷಯಗಳಲ್ಲಿ ಪರಿಷತ್ತಿಗೆ ಅಧೀನವಾಗಿರಬೇಕು

ಉ) ಜಿಲ್ಲಾ/ನಗರ/ತಾಲ್ಲೂಕು ಸಮಿತಿಗಳು ಅವುಗಳ ಕಾರ್ಯಕ್ರಮಗಳ ವರದಿಗಳನ್ನು ಪರಿಷತ್ತಿನ ಕೇಂದ್ರ ಕಚೇರಿಗೆ ನಿಯಮಿತವಾಗಿ ಕಳುಹಿಸ –ತಕ್ಕದ್ದು. ಲೆಕ್ಕ ಪತ್ರಗಳ ವಿವರಗಳನ್ನು ಮೂರು ತಿಂಗಳಿಗೊಂದಾವರ್ತಿ ಕಳಿಸುವುದಲ್ಲದೆ ಮಾರ್ಚ್ ತಿಂಗಳಾದ ಮೇಲೆ ಆಡಿಟ್ ಮಾಡಿಸಿ ಎರಡು ತಿಂಗಳೊಳಗಾಗಿ ಆ ವರದಿ ಮತ್ತು ಕಾರ್ಯಕ್ರಮಗಳ ವರದಿಯನ್ನು ಪರಿಷತ್ತಿಗೆ ಕಳುಹಿಸಬೇಕು. ಇದೇರೀತಿ ತಾಲ್ಲೂಕು ಸಮಿತಿಗಳೂ ಜಿಲ್ಲಾ ಸಮಿತಿಗಳಿಗೆ ವರದಿ ಕಳುಹಿಸಬೇಕು.



**೧೨. ಪರಿಷತ್ತಿನ ಅಧ್ಯಕ್ಷರ ಆಯ್ಕೆ:**

ಅ) ಪರಿಷತ್ತಿನ ಅಧ್ಯಕ್ಷರನ್ನು ಪರಿಷತ್ತಿನ ಎಲ್ಲಾ ಸದಸ್ಯರೂ ಚುನಾಯಿಸತಕ್ಕದ್ದು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು ಶರಣ ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸಾಕಷ್ಟು ಸೇವೆ ಮಾಡಿದವರಾಗಿರತಕ್ಕದ್ದು; ಶರಣ ಸಂಸ್ಕೃತಿಯ ಅನುಯಾಯಿಗಳಾಗಿರತಕ್ಕದ್ದು.

ಆ) ಪರಿಷತ್ತಿನ ಅಧ್ಯಕ್ಷರ ಚುನಾವಣೆಯು ಚುನಾವಣಾ ನಿಬಂಧನೆಗಳಿಗೆ ಅನುಸಾರವಾಗಿ ಐದು ವರ್ಷಕ್ಕೊಮ್ಮೆ ಸರ್ವಾನುಮತದ ಅಥವಾ ಗುಪ್ತ ಮತದಾನದ ಮೂಲಕ ನಡೆಯತಕ್ಕದ್ದು.

ಇ) ಚುನಾವಣೆಯು ನಡೆಯಬೇಕಾದ ವರ್ಷದ ವಾರ್ಷಿಕ ಸಭೆಯ ಸಂದರ್ಭದಲ್ಲೇ ಅಧ್ಯಕ್ಷರ ಚುನಾವಣೆ ನಡೆಯತಕ್ಕದ್ದು. (ಅಂಚೆಯ ಮೂಲಕ ಮತದಾನಕ್ಕೆ ಅವಕಾಶವಿರುವುದಿಲ್ಲ.)

ಈ) ಯಾವ ಕಾರಣದಿಂದಲಾದರೂ ಅಧ್ಯಕ್ಷ ಸ್ಥಾನ ತೆರವಾದಾಗ ಕಾರ್ಯಕಾರಿ ಸಮಿತಿಯು ಮುಂದಿನ ಅಧ್ಯಕ್ಷರ ಚುನಾವಣೆ ನಡೆಯುವವರೆಗೆ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿರುವ ಹಿರಿಯ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು. ಅದೇ ಕಾರ್ಯಕಾರಿ ಸಮಿತಿಯು ಮುಂದಿನ ಚುನಾವಣೆಯವರೆಗೆ ಮುಂದುವರೆಯತಕ್ಕದ್ದು.

ಉ) ಅವಶ್ಯಕತೆ ಕಂಡಾಗ ಅಧ್ಯಕ್ಷರು ಕಾರ್ಯಕಾರಿ ಸಮಿತಿಯೊಡನೆ ಸಮಾಲೋಚಿಸಿ ಪರಿಷತ್ತಿನ ವಿವಿಧ ಕಾರ್ಯಕಲಾಪಗಳನ್ನು ನಿರ್ವಹಿಸುವುದಕ್ಕಾಗಿ ಉಪಸಮಿತಿಗಳನ್ನು ರಚಿಸಿಕೊಳ್ಳಲು ಅವಕಾಶವಿರತಕ್ಕದ್ದು. ರಾಜ್ಯ/ಜಿಲ್ಲಾ/ನಗರ/ತಾಲ್ಲೂಕು ಹಂತಗಳಿಗೂ ಈ ನಿಬಂಧನೆ ಅನ್ವಯಿಸತಕ್ಕದ್ದು.

**೧೩. ಹಿರಿಯ ಉಪಾಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಗಳು ಮತ್ತು ಕೋಶಾಧ್ಯಕ್ಷರ ಆಯ್ಕೆ:**

ಅ) ಹಿರಿಯ ಉಪಾಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಗಳು ಮತ್ತು ಕೋಶಾಧ್ಯಕ್ಷರನ್ನು ಪರಿಷತ್ತಿನ ಗೌರವಾಧ್ಯಕ್ಷರೊಡನೆ ಸಮಾಲೋಚಿಸಿ, ಅವರ ಒಪ್ಪಿಗೆ ಪಡೆದು ಅಧ್ಯಕ್ಷರು ನೇಮಕಮಾಡುವುದು.



Scanned with CamScanner

ಇ) ಯಾವ ಕಾರಣದಿಂದಲಾದರೂ ಹಿರಿಯ ಉಪಾಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಗಳು, ಕೋಶಾಧ್ಯಕ್ಷರು – ಇವರ ಸ್ಥಾನಗಳು ತೆರವಾದರೆ ಅಧ್ಯಕ್ಷರು, ಗೌರವಾಧ್ಯಕ್ಷರೊಡನೆ ಸಮಾಲೋಚಿಸಿ ಅವರ ಒಪ್ಪಿಗೆ ಪಡೆದು ಆ ಸ್ಥಾನಗಳಿಗೆ ಪರಿಷತ್ತಿನ ಸದಸ್ಯರಲ್ಲಿ ಯಾರನ್ನಾದರೂ ನೇಮಿಸಿಕೊಳ್ಳುವುದು.

**೧೪. ಸದಸ್ಯ ಸ್ಥಾನದ ತೆರವು:**

೧. ಕಾರ್ಯಕಾರಿ ಸಮಿತಿಯ ಸದಸ್ಯರ ಸ್ಥಾನಗಳಲ್ಲಿ ಯಾವುದಾದರೂ ತೆರವಾದರೆ ಆ ಸ್ಥಾನಕ್ಕೆ ಮತ್ತೊಬ್ಬ ಸದಸ್ಯರನ್ನು ಮುಂದಿನ ಚುನಾವಣೆ ನಡೆಯುವವರೆಗೆ ನಾಮಕರಣ ಮಾಡಿಕೊಳ್ಳತಕ್ಕದ್ದು.

೨. ಯಾವ ಕಾಲದಲ್ಲಾಗಲೀ ಕಾರ್ಯಕಾರಿ ಸಮಿತಿಯ ಯಾವ ಅಧಿಕಾರ ಸ್ಥಾನವಾಗಲೀ ತೆರವಾಗಿ ನಿಂತಿದೆ ಎಂಬ ಕಾರಣದಿಂದ ಆ ಕಾಲದಲ್ಲಿ ಆ ಸಮಿತಿ ನಡೆಸುವ ಕಾರ್ಯಗಳು ಅಕ್ರಮಗಳೆನಿಸಲಾರವು.

೩. ಚುನಾವಣೆಯ ಫಲಿತಾಂಶವನ್ನು ಪ್ರಕಟಿಸಿದ ದಿನದಿಂದ ೨೦ ದಿನಗಳ ಒಳಗೆ ಕೇಂದ್ರ ಕಾರ್ಯಾಲಯದಲ್ಲಿ ಹೊಸ ಕಾರ್ಯಕಾರಿ ಸಮಿತಿ ಸೇರತಕ್ಕದ್ದು.

**೧೫. ಕಾರ್ಯಕಾರಿ ಸಮಿತಿ ಸಭೆ:**

ಅ) ಕಾರ್ಯಕಾರಿ ಸಮಿತಿಯ ಸಭೆ ವರ್ಷಕ್ಕೆ ಕನಿಷ್ಠ ಪಕ್ಷ ಮೂರು ಸಲ, ಸಾಮಾನ್ಯವಾಗಿ ಮೂರು ತಿಂಗಳ ಅಂತರದಲ್ಲಿ ಸೇರತಕ್ಕದ್ದು.

ಆ) ಪರಿಷತ್ತಿನ ಗೌರವಾಧ್ಯಕ್ಷರುಗಳ ಸಾನ್ನಿಧ್ಯದಲ್ಲಿ ಪರಿಷತ್ತಿನ ಅಧ್ಯಕ್ಷರು ಕಾರ್ಯಕಾರಿ ಸಮಿತಿಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಗೌರವಾಧ್ಯಕ್ಷರು ಹಾಜರಿರಲು ಸಾಧ್ಯವಾಗದ ಸಂದರ್ಭದಲ್ಲಿ ಅಧ್ಯಕ್ಷರು ಸಭೆಯನ್ನು ನಡೆಸತಕ್ಕದ್ದು. ಅಧ್ಯಕ್ಷರು ಹಾಜರಿಲ್ಲದಿರುವಾಗ ಹಿರಿಯ ಉಪಾಧ್ಯಕ್ಷರು, ಅವರು ಹಾಜರಿಲ್ಲದಿರುವಾಗ ಉಪಾಧ್ಯಕ್ಷರಲ್ಲಿ ಒಬ್ಬರನ್ನು ಅವರುಗಳೂ ಹಾಜರಿಲ್ಲದಾಗ ಕಾರ್ಯಕಾರಿ ಸಮಿತಿಯಲ್ಲಿ ಹಾಜರಿರುವ ಹಿರಿಯ ಸದಸ್ಯರೊಬ್ಬರನ್ನು ಆ ಸಭೆಗೆ ಅಧ್ಯಕ್ಷರಾಗಿರುವಂತೆ ಪ್ರಾರ್ಥಿಸಿ ಸಭೆಯನ್ನು ನಡೆಸತಕ್ಕದ್ದು.



**೧೬. ಸಭಾ ತಿಳಿವಳಿಕೆ:**

ಅ) ಕಾರ್ಯಕಾರಿ ಸಮಿತಿಯ ಸಾಮಾನ್ಯ ಸಭೆಗಳನ್ನು ಕುರಿತು ತಿಳಿವಳಿಕೆ ಪತ್ರಗಳನ್ನು ಹತ್ತು ದಿನಗಳಿಗೆ ಮುಂಚೆ ಸದಸ್ಯರಿಗೆ ತಲುಪುವಂತೆ ಕಳಿಸಿಕೊಡತಕ್ಕದ್ದು. ಇದರ ಜೊತೆಗೆ ಆಧುನಿಕ ತಂತ್ರಜ್ಞಾನದಡಿಯಲ್ಲಿರುವ ಇ–ಮೇಲ್, ಮತ್ತು ಮೊಬೈಲ್ –ಎಸ್‌ಎಂಎಸ್‌ಗಳ ಸೌಲಭ್ಯವನ್ನು ಬಳಸಿಕೊಂಡು ಸಭಾ ತಿಳುವಳಿಕೆಯ ಬಗ್ಗೆ ಎಲ್ಲಾ ಸದಸ್ಯರಿಗೆ ತಿಳಿಸುವುದು.

ಆ) '೧೬' (ಅ)ದಲ್ಲಿ ತಿಳಿಸಿದುದರ ಜೊತೆಗೆ ಸಮಿತಿಯ ತುರ್ತು ಸಭೆ ಸೇರುವ ಸಂದರ್ಭದಲ್ಲಿ ಕಾಲಾವಧಿಯನ್ನು ನಿರ್ದಿಷ್ಟವಾಗಿ ತಿಳಿಸಲೇಬೇಕೆಂಬ ನಿರ್ಬಂಧವಿರುವುದಿಲ್ಲ. ಅದನ್ನು ನಿರ್ಧರಿಸುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

**೧೭. ಅವಶ್ಯ ಸಂಖ್ಯೆ:**

೧. ಕಾರ್ಯಕಾರಿ ಸಮಿತಿ ಸಭೆಯ ಕಾರ್ಯನಿರ್ವಹಣೆಗೆ ಮೂರನೇ ಒಂದು ಭಾಗದಷ್ಟು ಸದಸ್ಯರಾದರೂ ಹಾಜರಿರಬೇಕು.

೨. ಈ ಅವಶ್ಯಕ ಸಂಖ್ಯೆಯಷ್ಟು ಮಂದಿ ಸದಸ್ಯರು ಇರದೆ ಇದ್ದರೆ ಸಭೆಯನ್ನು ಅರ್ಧಗಂಟೆ ಮುಂದಕ್ಕೆ ಹಾಕಿ, ಆಗ ಅವಶ್ಯಕ ಸಂಖ್ಯೆ ಇರಲಿ, ಇಲ್ಲದಿರಲಿ ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯ ವಿವರವನ್ನು ಪರ್ಯಾಲೋಚಿಸಿ ತೀರ್ಮಾನಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರುತ್ತದೆ.

**೧೮. ನೌಕರರ ನೇಮಕ:**

ಪರಿಷತ್ತಿನ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಬೇಕಾಗುವ ನೌಕರರನ್ನು ನಿಯಮಿಸುವುದಕ್ಕೂ, ದಂಡಿಸುವುದಕ್ಕೂ ತೆಗೆದು ಹಾಕುವುದಕ್ಕೂ ಮತ್ತು ಅವರ ಸಂಬಳ ಸಾರಿಗೆಗಳನ್ನು ಗೊತ್ತುಮಾಡುವುದಕ್ಕೂ ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು.

**೧೯. ಉಪನಿಬಂಧನೆಗಳು:**

೧. ಈ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಅವಶ್ಯಕವಿದ್ದಾಗ ಉಪನಿಬಂಧನೆಗಳನ್ನು ಮಾಡಿಕೊಳ್ಳುವ ಅಥವಾ ಬದಲಾಯಿಸುವ



Scanned with CamScanner

ಅಧಿಕಾರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. ಹೀಗೆ ಮಾರ್ಪಡಿಸಿದ ಉಪನಿಬಂಧನೆಗಳ ವಿವರವನ್ನು ಮುಂದಿನ ಸರ್ವ ಸದಸ್ಯರ ಅಧಿವೇಶನದ ಸಭೆಯಲ್ಲಿ ಅಂಗೀಕಾರ ಪಡೆಯತಕ್ಕದ್ದು.

೨. ಅಂತಹ ಉಪನಿಬಂಧನೆಗಳಲ್ಲಿ ಯಾವುದಾದರೂ ಬದಲಾವಣೆ ಆದರೆ ತತ್ಪೂರ್ವ ನಡೆದ ಕಾರ್ಯಕ್ರಮಗಳು ಅಸಿಂಧುವೆನಿಸಲಾರವು.

**೨೦. ವಾರ್ಷಿಕ ಸಭೆ:**

ಗೌರವಾಧ್ಯಕ್ಷರುಗಳ ಸಾನ್ನಿಧ್ಯದಲ್ಲಿ ಸರ್ವಸದಸ್ಯರ ವಾರ್ಷಿಕ ಸಭೆ ಸೆಪ್ಟೆಂಬರ್ ೩೦ರೊಳಗಾಗಿ ಸಾಮಾನ್ಯವಾಗಿ ನಡೆಯತಕ್ಕದ್ದು. ವಾರ್ಷಿಕ ಸಭೆ ಮತ್ತು ಇತರ ಸಭೆಗಳಲ್ಲಿ ಪರಿಷತ್ತಿನ ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಪರಿಷತ್ತಿನ ಅಧ್ಯಕ್ಷರ ಗೈರು ಹಾಜರಿಯಲ್ಲಿ ಹಿರಿಯ ಉಪಾಧ್ಯಕ್ಷರು, ಉಪಾಧ್ಯಕ್ಷರು ಅಥವಾ ಕಾರ್ಯಕಾರಿ ಮಂಡಳಿಯ ಸದಸ್ಯರುಗಳಲ್ಲಿ ಹಿರಿಯರಾದ ಒಬ್ಬರು ಸಭಾಕಾರ್ಯವನ್ನು ನಡೆಸತಕ್ಕದ್ದು.

೨೧. ವಾರ್ಷಿಕ ಸಭೆಯ ತಿಳಿವಳಿಕೆಯನ್ನು ಸಭೆ ಸೇರುವುದಕ್ಕೆ ೨೧ ದಿನಗಳ ಮುಂಚಿತವಾಗಿ ಸದಸ್ಯರುಗಳಿಗೆ ಪತ್ರದ ಮೂಲಕ ತಿಳಿಯಪಡಿಸತಕ್ಕದ್ದು. ಇದಲ್ಲದೆ ಆಧುನಿಕ ಸೌಲಭ್ಯಗಳಾದ ಇ-ಮೇಲ್, ಎಸ್‌ಎಂಎಸ್ ಅಥವಾ ಪತ್ರಿಕಾ ಪ್ರಕಟಣೆ ಮೂಲಕ ತಿಳಿಯಪಡಿಸುವುದು.

೨೨. ವಾರ್ಷಿಕ ಸಭೆಗೆ ಸೂಚನೆಗಳೇನಾದರೂ ಇದ್ದಲ್ಲಿ ಸದಸ್ಯರು ವಾರ್ಷಿಕ ಸಭೆ ಗೊತ್ತಾಗಿರುವ ದಿವಸಕ್ಕೆ ಕನಿಷ್ಠ ಪಕ್ಷ ೧೦ ದಿನಗಳಿಗೆ ಮುಂಚಿತವಾಗಿ ಪರಿಷತ್ತಿನ ಕಚೇರಿ ಮುಟ್ಟುವಂತೆ ಪತ್ರದ ಮುಖೇನ, ಇ-ಮೇಲ್ ಮೂಲಕ ಕಳುಹಿಸತಕ್ಕದ್ದು.

**೨೩. ಕಾರ್ಯಸೂಚಿ:**

**ವಾರ್ಷಿಕ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳು:**

ಅ) ಕಾರ್ಯಸಮಿತಿ ಒಪ್ಪಿಸುವ ವಾರ್ಷಿಕ ವರದಿಯನ್ನು, ಆಯವ್ಯಯ ಶೋಧಕರು ಪರಿಶೀಲಿಸಿದ ಲೆಕ್ಕ ಪಟ್ಟಿಗಳನ್ನೂ ಅಂಗೀಕರಿಸುವುದು.

ಆ) ಮುಂದಿನ ವರ್ಷಕ್ಕೆ ಆಯವ್ಯಯ ಶೋಧಕರ ನೇಮಕ

ಇ) ಮುಂದಿನ ವರ್ಷದ ಆಯವ್ಯಯ ಅಂದಾಜು ಪಟ್ಟಿಯ ಅಂಗೀಕಾರ

ಈ) ಕಾರ್ಯಸಮಿತಿಯ ಸೂಚನೆಗಳು



ಉ) ಸದಸ್ಯರು ನಿಯಮಾನುಸಾರವಾಗಿ ಕಳಿಸುವ ಇತರ ಸೂಚನೆಗಳು

ಊ) ೧೨ನೆ ನಿಬಂಧನೆಯಂತೆ ಅಧ್ಯಕ್ಷರ ಚುನಾವಣೆ ನಡೆಯುವ ವಾರ್ಷಿಕ ಸಭೆಯಲ್ಲಿ ಚುನಾವಣಾ ಫಲಿತಾಂಶವನ್ನು ಪ್ರಕಟಿಸುವುದು.

**೨೪. ಸರ್ವಸದಸ್ಯರ ಸಭೆಯ ನಿರ್ದಿಷ್ಟ ಸಂಖ್ಯೆ**

ಪ್ರತಿಯೊಂದು ಸರ್ವಸದಸ್ಯರ ಸಭೆಯಲ್ಲಿಯೂ ಐವತ್ತು ಮಂದಿಗೆ ಕಡಿಮೆಯಿಲ್ಲದೆ ಸದಸ್ಯರು ಹಾಜರಿರಬೇಕು. ಯಾವ ಸಭೆಯಲ್ಲೇ ಆಗಲಿ ಕ್ಲುಪ್ತ ಕಾಲಾನಂತರ ಅರ್ಧ ಗಂಟೆಯೊಳಗಾಗಿ ಈ ಅವಶ್ಯ ಸಂಖ್ಯೆಯಷ್ಟು ಸದಸ್ಯರು ಸೇರಿರದಿದ್ದರೆ ಆ ಸಭೆಯನ್ನು ಒಂದು ಗಂಟೆ ಮುಂದಕ್ಕೆ ಹಾಕತಕ್ಕದ್ದು. ಮುಂದಕ್ಕೆ ಹಾಕಿದ ಸಭೆಗೆ 'ಕೋರಂ' ನಿರ್ಬಂಧವಿರುವುದಿಲ್ಲ

**೨೫. ಸದಸ್ಯರ ಮತ ನೀಡುವ, ಅಭ್ಯರ್ಥಿಯಾಗುವ ಅಧಿಕಾರ:**

೧. ಸರ್ವ ಸದಸ್ಯರ ಸಭೆಯಲ್ಲಿ ಮತ್ತು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕು ಮತದಾರರ ಪಟ್ಟಿಯಲ್ಲಿ ಹೆಸರುಳ್ಳ ಸದಸ್ಯರಿಗೆ ಮಾತ್ರ ಇರತಕ್ಕದ್ದು.

೨. ಸಕಲ ಸದಸ್ಯರ ಸಭೆ ನಡೆಯುವ ದಿನಾಂಕಕ್ಕೆ ೬೦ ದಿನಗಳ ಮುಂಚೆ ಸದಸ್ಯರಾಗಿದ್ದವರಿಗೆ ಮಾತ್ರ ಆ ಸಭೆಯಲ್ಲಿ ಪಾಲುಗೊಳ್ಳಲು ಅಧಿಕಾರವಿರುತ್ತದೆ. ಹಾಗೆಯೇ ಪರಿಷತ್ತಿನ ಅಧ್ಯಕ್ಷ ಚುನಾವಣೆಯಲ್ಲಿ ಮತದಾನ ಮಾಡಲು ಚುನಾವಣಾ ದಿನಾಂಕಕ್ಕೆ ಕನಿಷ್ಠ ಒಂದು ವರ್ಷ ಮುಂಚೆ ಮತ್ತು ಅಭ್ಯರ್ಥಿಯಾಗಿ ನಿಲ್ಲಲು ಚುನಾವಣಾ ದಿನಾಂಕಕ್ಕೆ ಕನಿಷ್ಠ ಮೂರು ವರ್ಷ ಮುಂಚೆ ಸದಸ್ಯರಾಗಿರಬೇಕು.

೨೬. ಎಲ್ಲಾ ತೀರ್ಮಾನಗಳೂ ಸಭೆಯಲ್ಲಿಯ ಸದಸ್ಯರ ಬಹುಮತದಿಂದ ಆಗತಕ್ಕದ್ದು. ಆದರೆ ಅಂಗ ರಚನೆಯ ತಿದ್ದುಪಡಿಗಳನ್ನು ಮಾಡುವ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದವರಲ್ಲಿ ನಾಲ್ಕರಲ್ಲಿ ಮೂರು ಭಾಗಕ್ಕೆ ಕಡಿಮೆ ಇಲ್ಲದಷ್ಟು ಬಹುಮತವಿರಬೇಕು.

**೨೭. ವಿಶೇಷಸಭೆ:**

೧. ಕಾರ್ಯಕಾರಿ ಸಮಿತಿಗೆ ಅವಶ್ಯಕವೆಂದು ಕಂಡು ಬಂದಾಗ ಅಥವಾ ಮತ ಕೊಡುವ ಅಧಿಕಾರವುಳ್ಳ ಸದಸ್ಯರ ಸಂಖ್ಯೆಯ ಶೇ.೧೦ರಷ್ಟು



Scanned with CamScanner

ಮಂದಿ ಸದಸ್ಯರು ಬರಹ ಮೂಲಕ ಅಪೇಕ್ಷಿಸಿದಾಗ ಸಕಲ ಸದಸ್ಯರ ವಿಶೇಷ ಸಭೆಯನ್ನು ಕರೆಯತಕ್ಕದ್ದು.

೨. ವಿಶೇಷ ಸಭೆಯ ತಿಳಿವಳಿಕೆಯನ್ನು ಸಭೆ ಸೇರುವುದಕ್ಕೆ ೨೧ ದಿನಗಳ ಮುಂಚಿತವಾಗಿ ಸದಸ್ಯರುಗಳಿಗೆ ಪತ್ರದ ಮೂಲಕ ತಿಳಿಯಪಡಿಸತಕ್ಕದ್ದು. ಇದಲ್ಲದೆ ಆಧುನಿಕ ಸೌಲಭ್ಯಗಳಾದ ಇ-ಮೇಲ್, ಎಸ್‌ಎಂಎಸ್ ಅಥವಾ ಪತ್ರಿಕಾ ಪ್ರಕಟಣೆ ಮೂಲಕ ತಿಳಿಯಪಡಿಸುವುದು.

**೨೮. ಅಖಿಲ ಭಾರತ ಜಿಲ್ಲಾ/ನಗರ ಘಟಕ/ತಾಲ್ಲೂಕ ಶರಣ ಸಾಹಿತ್ಯ ಸಮ್ಮೇಳನ:**

೧. ಸಾಮಾನ್ಯವಾಗಿ ಪ್ರತಿವರ್ಷ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ನಡೆಸತಕ್ಕದ್ದು.

೨. ಯಾವುದೇ ಜಿಲ್ಲೆ/ನಗರ ಘಟಕ/ತಾಲ್ಲೂಕಸ್ಥಳದಲ್ಲಿ ಸಮ್ಮೇಳನ ನಡೆಯಬೇಕಾದಾಗ ಪರಿಷತ್ತಿನ ಆಯಾ ಘಟಕಗಳ ಸಮಿತಿಗಳು ಆ ಸಮ್ಮೇಳನ ನಡೆಸುವ ಜವಾಬ್ದಾರಿ ನಿರ್ವಹಿಸತಕ್ಕದ್ದು.

**೨೯. ಸಮ್ಮೇಳನಾಧ್ಯಕ್ಷತೆ:**

ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಪರಿಷತ್ತಿನ ಸದಸ್ಯರು ಮತ್ತು ಸ್ವಾಗತ ಸಮಿತಿ ಸೂಚಿಸಬಹುದಾದ ಹೆಸರುಗಳನ್ನು ಕಾರ್ಯಕಾರಿ ಸಮಿತಿ ಸಭೆ ಸೇರಿ ಪರಿಶೀಲಿಸಿ, ಗೌರವಾಧ್ಯಕ್ಷರ ಒಪ್ಪಿಗೆ ಪಡೆದು ಒಬ್ಬರನ್ನು ಅಂತಿಮವಾಗಿ ಆರಿಸತಕ್ಕದ್ದು. ಹಾಗೆ ಆಯ್ಕೆಯಾದವರ ಒಪ್ಪಿಗೆ ಪಡೆದು ನಂತರ ಹೆಸರನ್ನು ಪ್ರಕಟಿಸುವುದು.

**೩೦. ಕಾರ್ಯಕಾರಿ ಸಮಿತಿಯ ವಿಶೇಷಾಧಿಕಾರ:**

ಸಮ್ಮೇಳನವನ್ನು ನೆರವೇರಿಸುವ ಅಥವಾ ಮುಂದಕ್ಕೆ ಹಾಕುವ ನಿರ್ಧಾರವನ್ನು ಕಾರ್ಯಕಾರಿ ಸಮಿತಿಯೊಡನೆ ಸಮಾಲೋಚಿಸಿ ಕ್ರಮಕೈಗೊಳ್ಳಲು ಪರಿಷತ್ತಿನ ಅಧ್ಯಕ್ಷರಿಗೆ ಅಧಿಕಾರವಿರುತ್ತದೆ. ಮತ್ತು ನಿರ್ಧರಿಸುದುದನ್ನು ಗೌರವಾಧ್ಯಕ್ಷರ ಗಮನಕ್ಕೆ ತರುವುದು ಅಗತ್ಯ.

**೩೧. ನಿರ್ಣಯಗಳ ವಿಷಯ ನಿರ್ಧಾರಕ ಮಂಡಳಿ:**

ಅ. ಸಮ್ಮೇಳನದಲ್ಲಿ ಆಲೋಚಿಸತಕ್ಕ ವಿಷಯಗಳನ್ನು ನಿರ್ಧಾರ



ಮಾಡುವುದಕ್ಕಾಗಿ ಪರಿಷತ್ತಿನ ಅಧ್ಯಕ್ಷರು ಗೌರವಾಧ್ಯಕ್ಷರೊಡನೆ ಸಮಾಲೋಚಿಸಿ, ಒಂದು ವಿಷಯ ನಿರ್ಧಾರಕ ಮಂಡಳಿಯನ್ನು ನೇಮಿಸತಕ್ಕದ್ದು. ಅದರ ರಚನೆ ಕೆಳಗಿನಂತಿರಬೇಕು.

೧. ಸಮ್ಮೇಳನಕ್ಕೆ ಬಂದಿರುವ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು

೨. ಸಮ್ಮೇಳನದ ಅಧ್ಯಕ್ಷರು

೩. ಸಮ್ಮೇಳನಕ್ಕೆ ಬಂದಿರುವ ಹಿಂದಿನ ಸಮ್ಮೇಳನಗಳ ಅಧ್ಯಕ್ಷರು

೪. ಸ್ವಾಗತ ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು

೫. ಪರಿಷತ್ತಿನ ಅಧ್ಯಕ್ಷರು ನೇಮಿಸುವ ಐದು ಪ್ರತಿನಿಧಿಗಳು

ಆ. ವಿಷಯ ನಿರ್ಧಾರಕ ಸಮಿತಿ ಸಭೆ ಸಮ್ಮೇಳನದ ಬಹಿರಂಗ ಅಧಿವೇಶನ ನಡೆಯುವ ಹಿಂದಿನ ದಿನ ಸೇರಿ ಅಧಿಕೃತ ನಿರ್ಣಯಗಳ ಕರಡನ್ನು ಸಿದ್ಧಪಡಿಸತಕ್ಕದ್ದು. ಈ ಸಭೆಯ ಅಧ್ಯಕ್ಷತೆಯನ್ನು ಪರಿಷತ್ತಿನ ಅಧ್ಯಕ್ಷರು ವಹಿಸತಕ್ಕದ್ದು. ಅಂತಿಮ ನಿರ್ಣಯಗಳನ್ನು ಗೌರವಾಧ್ಯಕ್ಷರ ಗಮನಕ್ಕೆ ತರುವುದು.

**೩೨. ಆದಾಯ ಭಾಗ:**

೧. ಸಮ್ಮೇಳನದ ಪ್ರತಿನಿಧಿ ಶುಲ್ಕ ಪೂರ್ಣವಾಗಿ ಸಮ್ಮೇಳನದ ಖರ್ಚಿಗಾಗಿ ಸ್ವಾಗತ ಸಮಿತಿಗೆ ಸಲ್ಲತಕ್ಕದ್ದು.

೨. ಸಮ್ಮೇಳನ ವೆಚ್ಚ ಕಳೆದು ಉಳಿದಿರುವ ಹಣದಲ್ಲಿ ಶೇ.೫೦ಭಾಗ ಪರಿಷತ್ತಿನ ಕೇಂದ್ರ ಕಚೇರಿಗೂ, ಉಳಿದ ಭಾಗ ಸ್ಥಳೀಯ ಜಿಲ್ಲೆ/ನಗರ ಘಟಕ/ತಾಲ್ಲೂಕ ಸಮಿತಿಗೂ ಸಂದಾಯವಾಗಬೇಕು. ಯಾವ ಸಮಿತಿಗಳೂ ಇಲ್ಲದ ಕಡೆ ಸ್ವಾಗತ ಸಮಿತಿಯಿಂದ ಪೂರ್ಣ ಹಣವನ್ನು ಕೇಂದ್ರ ಪರಿಷತ್ತಿಗೆ ಪಡೆದು ಆ ಹಣದ ಶೇ.೫೦ ಭಾಗವನ್ನು ಆ ಜಿಲ್ಲೆ/ನಗರ ಘಟಕ/ತಾಲ್ಲೂಕ ಶರಣ ಸಾಹಿತ್ಯ ಚಟುವಟಿಕೆಗಳಿಗೆ ಬಳಸತಕ್ಕದ್ದು.

**೩೩. ವಿಶೇಷ ವಿಚಾರಗಳು-ಆಡಳಿತ ವರ್ಷ:**

ಪರಿಷತ್ತಿನ ಆಡಳಿತ ವರ್ಷ ಏಪ್ರಿಲ್ ೧ ರಿಂದ ಮಾರ್ಚ್ ೩೧ರವರೆಗೆ ಇರತಕ್ಕದ್ದು.



Scanned with CamScanner

೩೪. ಲೆಕ್ಕಗಳು:

ಅ. ಪರಿಷತ್ತಿನ ಎಲ್ಲಾ ಲೆಕ್ಕಪತ್ರಗಳನ್ನು ಕರಾರುವಕ್ಕಾಗಿ ಇಡತಕ್ಕದ್ದು. ಪ್ರತಿವರ್ಷವೂ ಲೆಕ್ಕಪತ್ರಗಳನ್ನು ಚಾರ್ಟೆಡ್ ಲೆಕ್ಕಾಧಿಕಾರಿಯಿಂದ ಆಡಿಟ್ ಮಾಡಿಸತಕ್ಕದ್ದು. ಲೆಕ್ಕಪತ್ರಗಳನ್ನು ಪ್ರತಿ ವರ್ಷದ ಮಾರ್ಚ್ ತಿಂಗಳ ೩೧ ರಂದು ಪೂರ್ಣಗೊಳಿಸತಕ್ಕದ್ದು.

ಆ. ಪರಿಷತ್ತಿನ ಲೆಕ್ಕಗಳ ವಿವರಗಳನ್ನು ಪರಿಷತ್ತಿನ ಯಾರೇ ಸದಸ್ಯರು ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಂದ ಲಿಖಿತ ಮೂಲಕ ಕೇಳಿ ಪಡೆಯಬಹುದು.

೩೫. ವ್ಯವಹಾರ:

೧. ಸರ್ವಸದಸ್ಯರ ಸಭೆಯ ನಿರ್ಣಯ ಆಗದೆ ಪರಿಷತ್ತಿನ ಸ್ಥಿರ ಆಸ್ತಿಗಳನ್ನು ಕ್ರಯ, ಆಧಾರ ಮುಂತಾದವುಗಳನ್ನು ಮಾಡತಕ್ಕದ್ದಲ್ಲ.

೨. ಪರಿಷತ್ತಿನ ಕೆಲಸಗಳೆಲ್ಲವೂ ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿ ನಡೆಯತಕ್ಕದ್ದು. ಪರಿಷತ್ತಿನ ಮುಖ್ಯವಾದ ಆಡಳಿತದಲ್ಲಿ ಎಂದರೆ ಲೇವಾದೇವಿಗಳಲ್ಲಿಯೂ, ಕೋರ್ಟಿನ ವ್ಯವಹಾರಗಳಲ್ಲಿಯೂ ಅಧ್ಯಕ್ಷರಾಗಲೀ ಅವರಿಂದ ನಾಮಕರಣಗೊಂಡ ಪದಾಧಿಕಾರಿಗಳಾಗಲೀ ಪರಿಷತ್ತಿನ ಪರವಾಗಿ ತಮ್ಮ ರುಜುವನ್ನು ಹಾಕಿ ಪರಿಷತ್ತಿನ ಮುದ್ರೆಯನ್ನೊತ್ತಿ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

೩. ಅಧ್ಯಕ್ಷರು ಮತ್ತು ಕೋಶಾಧ್ಯಕ್ಷ ಅಥವಾ ಪ್ರಧಾನ ಕಾರ್ಯದರ್ಶಿ ಚೆಕ್ಕುಗಳಿಗೆ ಸಂಯುಕ್ತವಾಗಿ ರುಜು ಹಾಕಿ ಬ್ಯಾಂಕುಗಳೊಡನೆ ವ್ಯವಹರಿಸುವ ಅಧಿಕಾರ ಹೊಂದಿರುತ್ತಾರೆ.

೪. ಪರಿಷತ್ತಿನ ಪ್ರತಿಫಲವು ಜಾತಿ, ಮತ ಮತ್ತು ಧರ್ಮಗಳ ಭೇದವಿಲ್ಲದೆ ಎಲ್ಲರಿಗೂ ದೊರೆಯತಕ್ಕದ್ದು.

೩೬. ಅ. ಆದಾಯ ತೆರಿಗೆ ಕಾನೂನು ೧೯೬೧ರ ಸೆಕ್ಷನ್ ೨(೧೫), ೧೧, ೧೨, ೧೩ ಮತ್ತು ೮೦ಜಿ ಗೆ ಭಂಗ ತರುವಂತಹ ಮತ್ತು ಪರಿಷತ್ತಿನ ಸನ್ನದು – ಮೆಮೊರಾಂಡ್ಯಂ ಆಫ್ ಅಸೋಸಿಯೇಷನ್ ಕಾನೂನು ನಿಬಂಧನೆಗಳಿಗೆ ಭಂಗ ತರುವಂತಹ ಯಾವುದೇ ತಿದ್ದುಪಡಿಗಳನ್ನು ಮಾಡಕೂಡದು. ಕಾಲಕಾಲಕ್ಕೆ ತಿದ್ದುಪಡಿ ಮಾಡಲ್ಪಡುವ ನಿಯಮಾವಳಿಯಲ್ಲಿ ಆದಾಯ ತೆರಿಗೆ ಕಮೀಷನ್‌ರವರ ಪೂರ್ವಭಾವಿ



ಒಪ್ಪಿಗೆಯಿಲ್ಲದೆ ಯಾವ ಬದಲಾವಣೆಗಳನ್ನೂ ಜಾರಿಗೊಳಿಸಕೂಡದು.

ಆ. ಪರಿಷತ್ತು ಒಂದುವೇಳೆ ವಿಸರ್ಜಿಸಲ್ಪಟ್ಟರೆ, ಆ ದಿನದಂದು ಇರುವ ಆಸ್ತಿಯನ್ನು ಯಾವ ಕಾರಣದಿಂದಲೂ ಪರಿಷತ್ತಿನ ಸದಸ್ಯರು, ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಆಡಳಿತ ಮಂಡಳಿಯ ಸದಸ್ಯರುಗಳಿಗೆ ಹಂಚತಕ್ಕದಲ್ಲ. ಆದರೆ ಕಾಲಕಾಲಕ್ಕೆ ತಿದ್ದುಪಡಿ ಹೊಂದಿದ ೧೯೬೧ನೇ ಆದಾಯ ತೆರಿಗೆ ೮೦ಜಿ ರಿಯಾಯಿತಿ ಪಡೆದಿರುವ ಮತ್ತು ಸರಿಸಮಾನ ಧ್ಯೇಯೋದ್ದೇಶಗಳನ್ನು ಹೊಂದಿರುವ ಇತರೆ ಸಂಸ್ಥೆಗಳಿಗೆ ವರ್ಗಾಯಿಸತಕ್ಕದ್ದು.

**೩೭. ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಉಪನಿಬಂಧನೆಗಳು:**

೧. ಅಸ್ತಿತ್ವದಲ್ಲಿರುವ ಕಾರ್ಯಕಾರಿ ಸಮಿತಿಯ ನಿರ್ದಿಷ್ಟ ಅವಧಿಯು ಮುಗಿಯುವುದಕ್ಕೆ ಮೂರು ತಿಂಗಳಿಗೆ ಮುಂಚಿತವಾಗಿ ಮುಂದಿನ ಅಧ್ಯಕ್ಷರ ಚುನಾವಣೆಗೆ ಏರ್ಪಾಟುಗಳನ್ನು ಮಾಡತಕ್ಕದ್ದು.

೨. ಅ) ಚುನಾವಣೆಯ ದಿನಕ್ಕೆ ೬೦ ದಿನಗಳ ಮೊದಲು ಮತದಾರ ಸದಸ್ಯರ ಕರಡು ಪಟ್ಟಿಯನ್ನು ಪರಿಷತ್ತಿನ ಕಚೇರಿಯಲ್ಲಿ ಪ್ರಕಟಿಸತಕ್ಕದ್ದು.

ಆ) ಮತದಾರರ ಕರಡು ಪಟ್ಟಿಯ ಪ್ರತಿಯನ್ನು ಬಯಸುವ ಸದಸ್ಯರು ಕಾರ್ಯಕಾರಿ ಸಮಿತಿ ನಿರ್ಧರಿಸಿದ ಬೆಲೆಕೊಟ್ಟು ಕೇಂದ್ರ ಕಚೇರಿಯಿಂದ ಪಡೆದುಕೊಳ್ಳಬಹುದು.

ಇ) ಈ ಬಗ್ಗೆ ಯಾರದ್ದಾದರೂ ಆಕ್ಷೇಪಣೆ ಇದ್ದರೆ ಎರಡುವಾರ ಅವಕಾಶ ಕೊಟ್ಟು ಅವುಗಳನ್ನು ಸ್ವೀಕರಿಸಿ ಚುನಾವಣೆಗೆ ೩೦ ದಿನಗಳ ಮೊದಲು ಮತದಾನಕ್ಕೆ ಅರ್ಹರಾದ ಸದಸ್ಯರ ಅಂತಿಮ ಪಟ್ಟಿಯನ್ನು ಪರಿಷತ್ತಿನಲ್ಲಿ ಪ್ರಕಟಿಸತಕ್ಕದ್ದು.

ಈ) ನಾಮಪತ್ರಗಳ ಪರಿಶೀಲನೆಯಾದ ನಂತರ ನಾಮಪತ್ರವನ್ನು ಹಿಂದೆ ತೆಗೆದುಕೊಳ್ಳುವ ಬಗ್ಗೆ ಮೂರು ದಿವಸಗಳ ಅವಧಿಯ ಅವಕಾಶವಿರಬೇಕು.

ಉ) ನಾಮಪತ್ರಗಳ ಸ್ವೀಕಾರದ ದಿವಸಕ್ಕೂ ಚುನಾವಣೆ ನಡೆಯುವ ದಿನಕ್ಕೂ ಕನಿಷ್ಠ ೨೦ ದಿನಗಳ ಅಂತರವಾದರೂ ಇರಬೇಕು.

ಊ) ನಾಮಪತ್ರ ಸ್ವೀಕಾರದ ಕೊನೆಯ ದಿನದಿಂದ ಮೂರು ದಿನಗಳ



Scanned with CamScanner

ಒಳಗಾಗಿ ಅವುಗಳ ಪರಿಶೀಲನೆ ನಡೆಸಬೇಕು.

ಋ) ಚುನಾವಣೆ ನಡೆಯುವ ಕನಿಷ್ಟ ಇಪ್ಪತ್ತು ದಿನಗಳ ಮೊದಲು ಎಲ್ಲಾ ಸ್ಪರ್ಧಿಗಳ ಹೆಸರನ್ನು ಅಕಾರಾದಿ ಕ್ರಮದಲ್ಲಿ ಪ್ರಕಟಿಸಬೇಕು.

ೠ) ಅಧ್ಯಕ್ಷ ಸ್ಥಾನಕ್ಕೆ ಒಂದೇ ಒಂದು ನಾಮಪತ್ರ ಬಂದಿದ್ದು, ಬೈಲಾ ಸಂಖ್ಯೆ ೧೨ಕ್ಕನುಗುಣವಾಗಿ ಇದ್ದರೆ ಅವರು ಚುನಾವಣೆ ಇಲ್ಲದೆ ಅವಿರೋಧವಾಗಿ ಆಯ್ಕೆಯಾದರೆಂದು ಘೋಷಿಸ-ಬೇಕು.

೩. ಸದಸ್ಯರ ಪಟ್ಟಿಯನ್ನು ಮತ್ತು ನಾಮಕರಣ ಪತ್ರಗಳನ್ನು ನಿಗದಿಪಡಿಸಿದ ಬೆಲೆಗೆ ಮಾರತಕ್ಕದ್ದು.

ಸಂಘ-ಸಂಸ್ಥೆಯ ಹೆಸರು : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ದಸ್ತಾವೇಜಿನ ವಿವರ : ವಿಶೇಷ ಕಾಪಿಯ ಮೇಲ್ಕಂಡ ನಡವಳಿಯ ಪ್ರತಿಗಳು

ಸ್ವೀಕರಿಸಿದ ದಿನಾಂಕ : ೧೪-೧೦-೧೫

ನೋಂದಣಿ ಸಂಖ್ಯೆ : ೧೧೨/೮೧-೩೨

ಸಂಪುಟ ಸಂಖ್ಯೆ : ೫

ವಿಲೇವಾರಿ ಸ್ವರೂಪ : ತಿದ್ದುಪಡಿ ಮಾಡಿದೆ.

ಸಹಿ/-

ಮೈಸೂರು ಜಿಲ್ಲಾ ಸಂಘಗಳ ನೋಂದಣಾಧಿಕಾರಿ, ಮೈಸೂರು
ಸಂಘ-ಸಂಸ್ಥೆಗಳ ನೋಂದದಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು



Scanned with CamScanner